# ಅಟಲ್ ಪಿಂಚಣಿ ಯೋಜನೆ (APY)

## 1. ಪರಿಚಯ

**1.1.** ಭಾರತ ಸರ್ಕಾರವು ಕಾರ್ಮಿಕ ವರ್ಗದ ನಿವೃತ್ತಿ ವೇತನ ಭದ್ರತೆಯ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದೆ. ಹಾಗೂ ಅವರನ್ನು ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸೇರ್ಪಡೆಗೊಳಿಸಲು ಉತ್ತೇಜನ ನೀಡುವುದು ಸರ್ಕಾರದ ಗುರಿಯಾಗಿದೆ. ರಾಷ್ಟ್ರೀಯ ಮಾದರಿ ಸರ್ವೆ ಸಂಸ್ಥೆಯ 2011–12ರ 66ನೇ ಸುತ್ತಿನ ಸರ್ವೆಯ ಪ್ರಕಾರ, ದೇಶದ ಒಟ್ಟು 47.29 ಕೋಟಿ ಕಾರ್ಮಿಕ ಬಲದ ಶೇಕಡಾ 88ರಷ್ಟಿರುವ ಅಸಂಘಟಿತ ವಲಯದ ಕೆಲಸಗಾರರ ದೀರ್ಘಕಾಲಿಕ ಸಂಕಷ್ಟಗಳನ್ನು ನಿವಾರಿಸುವ ಸಲುವಾಗಿ ಹಾಗೂ ಅಸಂಘಟಿತ ವಲಯದ ಕೆಲಸಗಾರರು ತಮ್ಮ ನಿವೃತ್ತ ಜೀವನಕ್ಕಾಗಿ ಉಳಿತಾಯ ಮಾಡುವ ಮನೋಭಾವವನ್ನು ಬೆಳೆಸುವ ನಿಟ್ಟಿನಲ್ಲಿ 2010–11ರಲ್ಲಿ ಸರ್ಕಾರವು 'ಸ್ವಾವಲಂಬನ್' ಯೋಜನೆಯನ್ನು ಆರಂಭಿಸಿತು. ಅದಾಗ್ಯೂ 60ರ ಹರೆಯದಲ್ಲಿ ಈ ಯೋಜನೆಯಿಂದ ಸಿಗಬಹುದಾದ ಪಿಂಚಣಿ ಸೌಲಭ್ಯಗಳ ಬಗ್ಗೆ ನಿರ್ದಿಷ್ಟತೆ ಇಲ್ಲವಾದ್ದರಿಂದ ಸ್ವಾವಲಂಬನ್ ಯೋಜನೆಯ ವ್ಯಾಪ್ತಿಯು ಅಸಮರ್ಪಕವಾಗಿದೆ.

**1.2.** 2015–16ನೇ ಸಾಲಿನ ಆಯ–ವ್ಯಯದಲ್ಲಿ ಸರ್ಕಾರವು ವಿಮೆ ಹಾಗೂ ಪಿಂಚಣಿ ವಲಯಗಳಲ್ಲಿ ಭಾರತೀಯರೆಲ್ಲರಿಗೂ, ವಿಶೇಷವಾಗಿ ಬಡ ಹಾಗೂ ದುರ್ಬಲ ವರ್ಗದ ಜನರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತಾ ಯೋಜನೆಗಳನ್ನು ಘೋಷಿಸಿದೆ. ಆದ್ದರಿಂದ ಫಲಾನುಭವಿಯ ವೈಯಕ್ತಿಕ ದೇಣಿಗೆ ಮೊತ್ತ ಹಾಗೂ ಯೋಜನಾ ಅವಧಿಗೆ ಅನುಗುಣವಾಗಿ ಆತನ/ ಆಕೆಯ ನಿವೃತ್ತಿಯ ಬಳಿಕ ಒಂದು ಖಚಿತ ಪಿಂಚಣಿಯನ್ನು ನೀಡುವ 'ಅಟಲ್ ಪಿಂಚಣಿ ಯೋಜನೆ'ಯ ಜಾರಿಯನ್ನು ಸರ್ಕಾರವು ಘೋಷಿಸಿತು. ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA) ದ ಆಡಳಿತಕ್ಕೊಳಪಟ್ಟ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (NPS)ಗೆ ಒಳಪಡುವ ಅಸಂಘಟಿತ ವಲಯದ ಎಲ್ಲ ಭಾರತೀಯ ಪೌರರ ಮೇಲೆ ಅಟಲ್ ಪಿಂಚಣಿ ಯೋಜನೆಯು ಕೇಂದ್ರೀಕೃತವಾಗಿದೆ. ಅಟಲ್ ಪಿಂಚಣಿ ಯೋಜನೆಯಡಿ ತನ್ನ ವೈಯಕ್ತಿಕ ದೇಣಿಗೆ ಮೊತ್ತಕ್ಕೆ ಅನುಗುಣವಾಗಿ ಫಲಾನುಭವಿಯು ತನ್ನ 60ನೆಯ ವಯಸ್ಸಿಗೆ ರೂ. 1000.00, ರೂ. 2000.00, ರೂ. 3000.00, ರೂ. 4000.00, ರೂ. 5000.00 – ಹೀಗೆ ಒಂದು ನಿರ್ದಿಷ್ಟ ಮೊತ್ತದ ಪಿಂಚಣಿಯನ್ನು ಪಡೆಯುತ್ತಾನೆ/ಳೆ. ಫಲಾನುಭವಿಯ ಮಾಸಿಕ ದೇಣಿಗೆ ಮೊತ್ತವು ಅವನು/ಳು ಯೋಜನೆಗೆ ಸೇರ್ಪಡೆಗೊಳ್ಳುವಾಗಿನ ವಯಸ್ಸನ್ನು ಅವಲಂಬಿಸಿರುತ್ತದೆ. 18ರಿಂದ 40ರ ವಯೋಮಿತಿಯವರು ಈ ಯೋಜನೆಗೆ ಸೇರಲು ಅರ್ಹತೆಯುಳ್ಳವರಾಗಿರುತ್ತಾರೆ. ಆದ್ದರಿಂದ ಫಲಾನುಭವಿಯು ಯೋಜನೆಗೆ ದೇಣಿಗೆ ನೀಡುವ ಕನಿಷ್ಠ ಅವಧಿಯು 20 ವರ್ಷಗಳಾಗಿರುತ್ತದೆ. ಈ ಮೂಲಕ ನಿರ್ದಿಷ್ಟ ಕನಿಷ್ಠ ಪಿಂಚಣಿಯ ಸೌಲಭ್ಯವನ್ನು ಪ್ರತಿಯೊಬ್ಬ ಫಲಾನುಭವಿಗೂ ಖಾತ್ರಿ ಪಡಿಸುವ ಈ ಯೋಜನೆಯು 1ನೇ ಜೂನ್ 2015ರಿಂದ ಜಾರಿಗೆ ಬರಲಿದೆ.

## 2. ಅಟಲ್ ಪಿಂಚಣಿ ಯೋಜನೆಯ ಸೌಲಭ್ಯಗಳು

**2.1** 18ರಿಂದ 40ರ ವಯೋಮಿತಿಯಲ್ಲಿ ಈ ಯೋಜನೆಗೆ ಸೇರ್ಪಡೆಗೊಳ್ಳುವ ಪ್ರತಿಯೊಬ್ಬರಿಗೂ ರೂ. 1000.00ದಿಂದ ರೂ. 5000.00ದವರೆಗೆ ಪಿಂಚಣಿ ನೀಡುವ ಖಾತ್ರಿಯನ್ನು ಯೋಜನೆಯು ನೀಡುತ್ತದೆ. ಫಲಾನುಭವಿಯ ವೈಯಕ್ತಿಕ ದೇಣಿಗೆಯ ಮೊತ್ತವು ಯೋಜನೆಗೆ ಸೇರ್ಪಡೆಗೊಳ್ಳುವಾಗಿನ ಫಲಾನುಭವಿಯ ವಯಸ್ಸಿನೊಂದಿಗೆ ಏರಿಳಿಕೆಯಾಗುತ್ತದೆ. ಸಣ್ಣ ವಯಸ್ಸಿಗೆ ಸೇರ್ಪಡೆಗೊಳ್ಳುವ ಫಲಾನುಭವಿಯ ದೇಣಿಗೆ ಮೊತ್ತವು ಕಡಿಮೆ ಇರುತ್ತದೆ. ಹಾಗೂ ಯೋಜನೆಗೆ ಸೇರ್ಪಡೆಗೊಳ್ಳುವ ವಯಸ್ಸು ಹೆಚ್ಚಿದಂತೆ ದೇಣಿಗೆ ಮೊತ್ತವೂ ಹೆಚ್ಚುತ್ತ ಹೋಗುತ್ತದೆ.

## 3. ಅಟಲ್ ಪಿಂಚಣಿ ಯೋಜನೆಗೆ ಬೇಕಾದ ಅರ್ಹತೆಗಳು

**3.1** ಬ್ಯಾಂಕಿನಲ್ಲಿ ಖಾತೆ ಹೊಂದಿರುವ ಎಲ್ಲ ಭಾರತೀಯ ಪೌರರಿಗೂ ಈ ಯೋಜನೆಯು ಅನ್ವಯಿಸುತ್ತದೆ. ಫಲಾನುಭವಿಯ ಒಟ್ಟು ವೈಯಕ್ತಿಕ ದೇಣಿಗೆಯ ಶೇಕಡಾ 50ರಷ್ಟು ಅಥವಾ ವಾರ್ಷಿಕ ರೂ. 1000.00– ಇವುಗಳಲ್ಲಿ ಯಾವುದು ಕಡಿಮೆಯೋ ಆ ಮೊತ್ತದ ಸಹದೇಣಿಗೆಯನ್ನು ಕೇಂದ್ರ ಸರ್ಕಾರವು ಫಲಾನುಭವಿಗಳೆಲ್ಲರಿಗೂ 5 ವರ್ಷಗಳ ಅವಧಿಯವರೆಗೆ ನೀಡುತ್ತದೆ. ಅಂದರೆ, 1 ಜೂನ್ 2015ರಿಂದ 31 ಡಿಸೆಂಬರ್ 2015ರ ಅವಧಿಯಲ್ಲಿ ಯೋಜನೆಗೆ ಸೇರ್ಪಡೆಗೊಳ್ಳುವ ಇತರ ಯಾವುದೇ ಶಾಸನಬದ್ಧ ಸಾಮಾಜಿಕ ಭದ್ರತಾ ಯೋಜನೆಯ ಸದಸ್ಯರಲ್ಲದ ಹಾಗೂ ಆದಾಯಕರ ಪಾವತಿದಾರರಲ್ಲದ ಎಲ್ಲ ಫಲಾನುಭವಿಗಳು 2015–16ನೇ ಆರ್ಥಿಕ ವರ್ಷದಿಂದ 2019–20ನೇ ಸಾಲಿನವರೆಗೆ ಸರ್ಕಾರದ ಪಾಲಿನ ದೇಣಿಗೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆ ಬಳಿಕವೂ ಯೋಜನೆಯು ಯಥಾವತ್ ಮುಂದುವರಿಯುತ್ತದೆ. ಆದರೆ ಸರ್ಕಾರದ ಸಹದೇಣಿಗೆಯು ಮಾತ್ರ ಅನ್ವಯಿಸುವುದಿಲ್ಲ.

**3.2** ಕೇಂದ್ರ ದಾಖಲೆ ನಿರ್ವಹಣಾ ಏಜೆನ್ಸಿಯಿಂದ ದೃಢೀಕರಣ ಪಡೆದ ಬಳಿಕ ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA)ದ ನಿರ್ಧಾರದ ಮೇರೆಗೆ ನಿಯತಕಾಲಿಕವಾಗಿ ಅರ್ಹ ಶಾಶ್ವತ ನಿವೃತ್ತಿ ಖಾತಾ ಸಂಖ್ಯೆ (PRAN) ಹೊಂದಿರುವವರ ಖಾತೆಗೆ ಸರ್ಕಾರದ ಸಹದೇಣಿಗೆಯನ್ನು ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA)ವು ಪಾವತಿಸುತ್ತದೆ.

## 4. ಸೇರ್ಪಡೆಗೊಳ್ಳುವ ವಯಸ್ಸು ಹಾಗೂ ದೇಣಿಗೆ ಅವಧಿ

**4.1** ಅಟಲ್ ಪಿಂಚಣಿ ಯೋಜನೆಗೆ ಸೇರ್ಪಡೆಗೊಳ್ಳುವ ಕನಿಷ್ಠ ವಯಸ್ಸು 18 ಹಾಗೂ ಗರಿಷ್ಠ ವಯಸ್ಸು 40. ಯೋಜನೆಯಿಂದ ಹೊರಬರುವ ಹಾಗೂ ಪಿಂಚಣಿ ಆರಂಭಗೊಳ್ಳುವ ವಯಸ್ಸು 60. ಆದ್ದರಿಂದ ಫಲಾನುಭವಿಯು ಯೋಜನೆಗೆ ದೇಣಿಗೆ ನೀಡುವ ಕನಿಷ್ಠ ಅವಧಿಯು 20 ವರ್ಷಗಳಾಗಿರುತ್ತದೆ.

## ಅಟಲ್ ಪಿಂಚಣಿ ಯೋಜನೆಯ ಗುರಿ

**5.1** ಮುಖ್ಯವಾಗಿ ಅಸಂಘಟಿತ ವಲಯದ ಕೆಲಸಗಾರರು ಯೋಜನೆಯ ಗುರಿಯಾಗಿದ್ದಾರೆ.

## 6. ನೋಂದಣಿ ಹಾಗೂ ಚಂದಾದಾರರ ಪಾವತಿ

**6.1** ಬ್ಯಾಂಕ್ ಖಾತೆಯನ್ನು ಹೊಂದಿರುವ ಎಲ್ಲ ಅರ್ಹ ಫಲಾನುಭವಿಗಳು ತಮ್ಮ ಖಾತೆಯಿಂದ ನಿಯತಕಾಲಿಕವಾಗಿ ಕಡಿತಗೊಳ್ಳುವ ಸೌಲಭ್ಯದೊಂದಿಗೆ ಯೋಜನೆಗೆ ಸೇರ್ಪಡೆಗೊಳ್ಳಬಹುದು. ದೇಣಿಗೆ ಸಂಗ್ರಹಣಾ ಶುಲ್ಕವನ್ನು ಕಡಿತಗೊಳಿಸುವುದಕ್ಕೂ ಇದು ಸಹಕಾರಿ. ಚಂದಾದಾರರು ದೇಣಿಗೆ ಚಂದಾ ಪಾವತಿಯ ದಿನಾಂಕಕ್ಕೆ ಸರಿಯಾಗಿ ತಮ್ಮ ಖಾತೆಯಲ್ಲಿ ಸಾಕಷ್ಟು ಮೊತ್ತವನ್ನು ಕಾದಿರಿಸಿ, ತಡವಾದ ಪಾವತಿಗಳ ದಂಡನೆಯಿಂದ ತಪ್ಪಿಸಿಕೊಂಡರಾಯಿತು. ಮೊದಲ ದೇಣಿಗೆ ಪಾವತಿಯ ದಿನಾಂಕಕ್ಕೆ ಅನುಗುಣವಾಗಿ ಮುಂದಿನ ಮಾಸಿಕ ದೇಣಿಗೆ ಪಾವತಿ ದಿನಾಂಕವು ನಿರ್ಧಾರಿತವಾಗುತ್ತದೆ. ಮತ್ತೆ ಮತ್ತೆ ಮಾಸಿಕ ದೇಣಿಗೆ ಪಾವತಿಗೆ ತಪ್ಪುವ ಚಂದಾದಾರರ ಖಾತೆಯು ಮುಕ್ತಾಯಗೊಳ್ಳುವ ಹಾಗೂ ಕೇಂದ್ರ ಸರ್ಕಾರದ ಸಹದೇಣಿಗೆಯು ನಿಲುಗಡೆಯಾಗುವ ಸಾಧ್ಯತೆಗಳೂ ಇವೆ. ಅಲ್ಲದೆ ಯೋಜನೆಯ ಸೌಲಭ್ಯ ಪಡೆಯುವಲ್ಲಿ ತಮ್ಮ ಅರ್ಹತೆಯ ಬಗ್ಗೆ ಯಾವುದೇ ರೀತಿಯ ತಪ್ಪು ಯಾ ಸುಳ್ಳು ಮಾಹಿತಿ ನೀಡಿದ್ದು ಸಾಬೀತಾದಲ್ಲಿ ಸರ್ಕಾರದ ಅಷ್ಟೂ ದೇಣಿಗೆ ಮೊತ್ತವನ್ನು ದಂಡನೆ ಸಹಿತ ಮರುಪಾವತಿಸಬೇಕಾಗುತ್ತದೆ. ನೋಂದಣಿಯ ಸಮಯದಲ್ಲಿ ಫಲಾನುಭವಿ, ಅವರ ಪತಿ/ಪತ್ನಿ ಹಾಗೂ ನಾಮನಿರ್ದೇಶಿತರನ್ನು ಗುರುತಿಸಲು ಆಧಾರ್ ಕಾರ್ಡ್ 'ನಿಮ್ಮ ಗ್ರಾಹಕರನ್ನು ಅರಿಯಿರಿ'ಗೆ ಪ್ರಾಥಮಿಕ ದಾಖಲೆಯಾಗಿರುತ್ತದೆ. ಪಿಂಚಣಿ ಹಕ್ಕು ಹಾಗೂ ಸೌಲಭ್ಯ ಪಡೆಯುವಲ್ಲಿ ಮುಂದೆ ಉಂಟಾಗಬಹುದಾದ ಯಾವುದೇ ರೀತಿಯ ತಕರಾರುಗಳನ್ನು ನಿವಾರಿಸಲು ಇದು ಸಹಕಾರಿಯಾಗುತ್ತದೆ. ಚಂದಾದಾರರು ಮಾಸಿಕ ರೂ. 1000.00 ದಿಂದ ರೂ. 5000.00ದವರೆಗೆ ಒಂದು ಮೊತ್ತವನ್ನು ತಮ್ಮ ಮಾಸಿಕ ಪಿಂಚಣಿಗೆ ಆಯ್ಕೆ ಮಾಡಿಕೊಂಡು ಅದಕ್ಕೆ ಅನ್ವಯವಾಗುವ ಮಾಸಿಕ ದೇಣಿಗೆಯನ್ನು ನಿಯತವಾಗಿ ಪಾವತಿಸಬೇಕು. ತಾವು ಆರಿಸಿದ ಪಿಂಚಣಿ ಮೊತ್ತವನ್ನು ಯೋಜನೆಯ ಅವಧಿಯಲ್ಲಿ ತಮ್ಮ ಲಭ್ಯ ಮಾಸಿಕ ಪಿಂಚಣಿ ಮೊತ್ತಕ್ಕೆ ಅನುಗುಣವಾಗಿ ಏರಿಸಬಹುದು ಅಥವಾ ಇಳಿಸಬಹುದು. ಆದರೆ ಈ ಬಲಾಯಿಸುವ ಅವಕಾಶವನ್ನು ವರ್ಷದಲ್ಲಿ ಒಂದು ಬಾರಿ, ಎಪ್ರಿಲ್ ತಿಂಗಳಲ್ಲಿ ಮಾತ್ರ ನೀಡಲಾಗುತ್ತದೆ. ಅಟಲ್ ಪಿಂಚಣಿ ಯೋಜನೆಗೆ ನೋಂದಾವಣೆಗೊಳ್ಳುವ ಪ್ರತಿಯೊಬ್ಬ ಫಲಾನುಭವಿಗೂ ಖಾತರಿಪಡಿಸಿದ ಪಿಂಚಣಿ ಮೊತ್ತ, ಮಾಸಿಕ ದೇಣಿಗೆ ಪಾವತಿಯ ದಿನಾಂಕ, ಶಾಶ್ವತ ನಿವೃತ್ತಿ ಖಾತಾ ಸಂಖ್ಯೆ (PRAN) ಇತ್ಯಾದಿ ಮಾಹಿತಿಗಳನ್ನು ಒಳಗೊಂಡ ಸ್ವೀಕೃತಿಪತ್ರವನ್ನು ಒದಗಿಸಲಾಗುತ್ತದೆ.

## 7. ನೋಂದಣಾ ಏಜೆನ್ಸಿಗಳು

**7.1** ಸ್ವಾವಲಂಬನ್ ಯೋಜನೆಯ ಎಲ್ಲ ಸೇವಾನಿರತ ಏಜೆನ್ಸಿಗಳು ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (NPS)ಯ ನೋಂದಾವಣಾ ಏಜೆನ್ಸಿಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಸೇವೆ ನೀಡುವ ಬ್ಯಾಂಕುಗಳು ಲಭ್ಯ ಬ್ಯಾಂಕೇತರ ಸಂಸ್ಥೆಗಳು, ಸಣ್ಣ ವಿಮಾ ಏಜೆಂಟರು ಹಾಗೂ ಮ್ಯೂಚುವಲ್ ಫಂಡ್ ಏಜೆಂಟರುಗಳನ್ನು ಇತರ ನಿರ್ವಹಣಾ ಚಟುವಟಿಕೆಗಳಿಗೆ ನಿಯೋಜಿಸಬಹುದು ಹಾಗೂ ಸರ್ಕಾರ/ ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA)ದಿಂದ ತಾವು ಪಡೆಯುವ ಪ್ರೋತ್ಸಾಹಧನವನ್ನು ತಾವು ನಿಯೋಜಿಸುವ ಏಜೆಂಟರುಗಳಿಗೆ ತಮ್ಮ ಇಚ್ಛಾನುಸಾರ ಹಂಚಬಹುದು.

## 8. ಅಟಲ್ ಪಿಂಚಣಿ ಯೋಜನೆಯ ನಿರ್ವಹಣಾ ಚೌಕಟ್ಟು

**8.1** ಇದು ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA)ದ ಆಡಳಿತಕ್ಕೆ ಒಳಪಟ್ಟ ಕೇಂದ್ರ ಸರ್ಕಾರದ ಯೋಜನೆಯಾಗಿದೆ. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (NPS)ಯ ಸಾಂಸ್ಥಿಕ ರೂಪುರೇಷೆಯನ್ನೇ ಅಟಲ್ ಪಿಂಚಣಿ ಯೋಜನೆಯಡಿ ಚಂದಾದಾರರ ನೋಂದಣಿಗೆ ಬಳಸಲಾಗುವುದು ಹಾಗೂ ಖಾತೆ ತೆರೆಯುವ ಅರ್ಜಿನಮೂನೆಯೂ ಸೇರಿದಂತೆ ಎಲ್ಲ ರೀತಿಯ ದಾಖಲೆಗಳನ್ನು ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA)ವು ರೂಪಿಸುತ್ತದೆ.

## 9. ಅಟಲ್ ಪಿಂಚಣಿ ಯೋಜನೆಗೆ ಅನುದಾನದ ಒದಗಿಸುವಿಕೆ

**9.1** ಸರ್ಕಾರವು (i) ಫಲಾನುಭವಿಗಳಿಗೆ ನಿರ್ದಿಷ್ಟ ಪಿಂಚಣಿ ಖಾತ್ರಿಯನ್ನು ಒದಗಿಸುತ್ತದೆ. (ii) ಒಟ್ಟು ವೈಯಕ್ತಿಕ ದೇಣಿಗೆಯ ಶೇಕಡಾ 50ರಷ್ಟು ಅಥವಾ ವಾರ್ಷಿಕ ರೂ. 1000.00– ಇವುಗಳಲ್ಲಿ ಯಾವುದು ಕಡಿಮೆಯೋ ಆ ಮೊತ್ತದ ಸಹದೇಣಿಗೆಯನ್ನು ಕೇಂದ್ರ ಸರ್ಕಾರವು ಎಲ್ಲ ಅರ್ಹ ಫಲಾನುಭವಿಗಳಿಗೆ ನೀಡುತ್ತದೆ. ಮತ್ತು (iii) ದೇಣಿಗೆ ಸಂಗ್ರಹಣಾ ಏಜೆನ್ಸಿಗಳಿಗೆ ನೀಡುವ ಪ್ರೋತ್ಸಾಹಧನವೂ ಸೇರಿದಂತೆ ಅಟಲ್ ಪಿಂಚಣಿ ಯೋಜನೆಗೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುವ ಸಲುವಾಗಿ ನಡೆಸುವ ಪ್ರಚಾರ ಹಾಗೂ ಅಭಿವೃದ್ದಿ ಚಟುವಟಿಕೆಗಳ ವೆಚ್ಚಗಳನ್ನೂ ಸರ್ಕಾರವು ಭರಿಸುತ್ತದೆ.

## 10. ಸ್ವಾವಲಂಬನ್ ಯೋಜನೆಯಿಂದ ಅಟಲ್ ಪಿಂಚಣಿ ಯೋಜನೆಗೆ ವಲಸೆ

**10.1** ಚಾಲ್ತಿಯಲ್ಲಿರುವ ಸ್ವಾವಲಂಬನ್ ಚಂದಾದಾರರು ಅರ್ಹರಿದ್ದಲ್ಲಿ ಹೊರಬರುವ ಆಯ್ಕೆಯೊಂದಿಗೆ ಅಟಲ್ ಪಿಂಚಣಿ ಯೋಜನೆಗೆ ತನ್ನಿಂತಾನೇ ವರ್ಗಾವಣೆಗೊಳ್ಳುತ್ತಾರೆ. ಹಾಗಾದರೂ, ಸರ್ಕಾರದ 5 ವರ್ಷಗಳ ಸಹದೇಣಿಗೆಯ ಸೌಲಭ್ಯ ಮಾತ್ರ 5 ವರ್ಷಗಳ ಅವಧಿಯನ್ನು ಮೀರುವುದಿಲ್ಲ. ಅಂದರೆ, ಸ್ವಾವಲಂಬನ್ ಯೋಜನೆಯ ಫಲಾನುಭವಿಯಾಗಿ ಈಗಾಗಲೇ ಒಂದು ವರ್ಷ ಸರ್ಕಾರದ ದೇಣಿಗೆಯ ಸೌಲಭ್ಯವನ್ನು ಪಡಕೊಂಡಿದ್ದಲ್ಲಿ ಅಟಲ್ ಪಿಂಚಣಿ ಯೋಜನೆಯಡಿ ಮುಂದಿನ 4 ವರ್ಷಗಳಿಗಷ್ಟೇ ಸೌಲಭ್ಯವು ಮುಂದುವರಿಯುತ್ತದೆ. ಚಾಲ್ತಿಯಲ್ಲಿರುವ ಸ್ವಾವಲಂಬನ್ ಫಲಾನುಭವಿಗಳು ಪ್ರಸ್ತಾವಿಕ ಅಟಲ್ ಪಿಂಚಣಿ ಯೋಜನೆಯಿಂದ ಹೊರಬರಲು ಇಚ್ಛಿಸಿದಲ್ಲಿ ಅಂಥ ಅರ್ಹ ಫಲಾನುಭವಿಗಳಿಗೆ 2016–17ನೇ ಸಾಲಿನವರೆಗೆ ಸರ್ಕಾರದ ಸಹದೇಣಿಗೆಯ ಸೌಲಭ್ಯವು ಅವರು ಸದ್ರಿ ಯೋಜನೆಯಿಂದ ಹೊರಬರುವ ವಯಸ್ಸನ್ನು ತಲಪುವವರೆಗೆ ಮುಂದುವರಿಯುತ್ತದೆ.

**10.2** ಚಾಲ್ತಿಯಲ್ಲಿರುವ 18ರಿಂದ 40 ವಯೋಮಿತಿಯ ಸ್ವಾವಲಂಬನ್ ಚಂದಾದಾರರು ಅಟಲ್ ಪಿಂಚಣಿ ಯೋಜನೆಗೆ ತನ್ನಿಂತಾನೇ ವರ್ಗಾವಣೆಗೊಳ್ಳುತ್ತಾರೆ. ಅವರನ್ನು ಹೊಸ ಯೋಜನೆಗೆ ವರ್ಗಾವಣೆಗೊಳಿಸಿ, ಸದ್ರಿ ವಲಸೆಯ ಪ್ರಕ್ರಿಯೆಗಳನ್ನು ಸುಸೂತ್ರವಾಗಿ ಗಣಕಯಂತ್ರ ಮುಖೇನ ನೆರವೇರಿಸಲಾಗುವುದು. ಸದ್ರಿ ಚಂದಾದಾರರು ತಮ್ಮ ಸಮೀಪದ ಅಧಿಕೃತ ಬ್ಯಾಂಕ್ ಶಾಖೆಯನ್ನು ತಮ್ಮ ಶಾಶ್ವತ ನಿವೃತ್ತಿ ಖಾತಾ ಸಂಖ್ಯೆ (PRAN) ಮಾಹಿತಿಗಳೊಂದಿಗೆ ಸಂಪರ್ಕಿಸಿ, ಸ್ವಾವಲಂಬನ್ ಖಾತೆಯನ್ನು ಅಟಲ್ ಪಿಂಚಣಿ ಯೋಜನೆಗೆ ವರ್ಗಾಯಿಸಕೊಳ್ಳಬಹುದು.

**10.3** ವಯಸ್ಸು 40 ಮೀರಿದ ಚಾಲ್ತಿಯಲ್ಲಿರುವ ಸ್ವಾವಲಂಬನ್ ಚಂದಾದಾರರು ಯೋಜನೆಯನ್ನು ಮಉುಂದುವರಿಸುವ ಇಚ್ಛ ಇಲ್ಲದಿದ್ದಲ್ಲಿ, ಹೊರಬರಲು ಅವಕಾಶವಿದ್ದು, ಯೋಜನೆಯನ್ನು ಕೊನೆಗೊಳಿಸಿ, ತಮ್ಮ ಸಂಪೂರ್ಣ ಮೊತ್ತವನ್ನು ನಗದೀಕರಿಸಿಕೊಳ್ಳಬಹುದು ಅಥವಾ 60 ವಯಸ್ಸಿನವರೆಗೆ ಯಥವತ್ ಮುಮದುವರಿಸಿ, ಯೋಜನೆಯ ಸೌಲಭ್ಯವನ್ನು ಪಡಕೊಳ್ಳಬಹುದು.

## 11. ಪಾವತಿಗೆ ತಪ್ಪಿದಲ್ಲಿ ದಂಡನೆ

**11.1** ಅಟಲ್ ಪಿಂಚಣಿ ಯೋಜನೆಯಡಿ, ಚಂದಾದಾರರಿಗೆ ಮಾಸಿಕ ನೆಲೆಯಲ್ಲಿ ದೇಣಿಗೆಯನ್ನು ಪಾವತಿಸಲು ಅವಕಾಶವಿದೆ. ಅವಧಿ ಮೀರಿದ ಪಾವತಿಗೆ ಈ ಕೆಳಗಿನಂತೆ ಮಾಹೆಯಾನ ರೂ. 1.00ರಿಂದ ರೂ. 10.00ರವರೆಗೆ ಹೆಚ್ಚುವರಿ ಮೊತ್ತವನ್ನು ಬ್ಯಾಂಕುಗಳು ಮಾಡಲು ಮಾಡಬೇಕಾಗುತ್ತದೆ.

- ಮಾಸಿಕ ರೂ. 100.00 ಮೀರದ ಪಾವತಿಗಳಿಗೆ ಮಾಹೆಯಾನ ರೂ. 1.00
- ಮಾಸಿಕ ರೂ. 101.00ರಿಂದ ರೂ. 500.00ರವರೆಗಿನ ಪಾವತಿಗಳಿಗೆ ಮಾಹೆಯಾನ ರೂ. 2.00
- ಮಾಸಿಕ ರೂ. 501.00 ರಿಂದ ರೂ. 1000.00ದವರೆಗಿನ ಪಾವತಿಗಳಿಗೆ ಮಾಹೆಯಾನ ರೂ. 5.00
- ಮಾಸಿಕ ರೂ. 1001.00ಕ್ಕೂ ಮೀರಿದ ಪಾವತಿಗಳಿಗೆ ಮಾಹೆಯಾನ ರೂ. 10.00

ದೇಣಿಗೆಯ ಚಂದಾ ಮೊತ್ತಕ್ಕೆ ಅನುಗುಣವಾಗಿ ಪ್ರತಿಯೊಬ್ಬ ಚಂದಾದಾರರಿಗೂ ನಿರ್ದಿಷ್ಟ ಮೊತ್ತದ ಬಡ್ಡಿ/ ದಂಡನೆಯು ಅನ್ವಯಿಸುತ್ತದೆ.

**11.2** ದೇಣಿಗೆ ಪಾವತಿಯನ್ನು ಮುಂದುವರಿಸದೇ ಹೋದಲ್ಲಿ:

- 6 ತಿಂಗಳ ಬಳಿಕ ಖಾತೆಯು ನಿಶ್ಚಲಗೊಳ್ಳುತ್ತದೆ.
- 12 ತಿಂಗಳ ಬಳಿಕ ಖಾತೆಯು ಸ್ಥಗಿತಗೊಳ್ಳುತ್ತದೆ
- 24 ತಿಂಗಳ ಬಳಿಕ ಖಾತೆಯನ್ನು ಕೊನೆಗೊಳ್ಳುತ್ತದೆ.

## 12. ಅವಧಿ ಮೀರಿದ ಪಾವತಿಗಳ ಹೆಚ್ಚುವರಿ ಮೊತ್ತಗಳ ನಿರ್ವಹಣೆ

**12.1** ಅಟಲ್ ಪಿಂಚಣಿ ಯೋಜನಾ ತತ್ರಾಂಶವು ಪಾವತಿಯ ನಿಗದಿತ ದಿನಾಂಕದಂದು ತಗಾದೆಯನ್ನು ಸೃಷ್ಟಿಸುತ್ತದೆ ಹಾಗೂ ಚಂದಾದಾರರ ಖಾತೆಯಿಂದ ಸದ್ರಿ ಮೊತ್ತವನ್ನು ವಸೂಲು ಮಾಡುವವರೆಗೂ ತಗಾದೆಯನ್ನು ನೀಡುತ್ತಲೇ ಇರುತ್ತದೆ.

**12.2** ಮಾಸಿಕ ದೇಣಿಗೆಯ ವಸೂಲು ದಿನಾಂಕವು ಆಯಾ ಖಾತೆಯ ಪಾವತಿ ದಿನಾಂಕವಾಗಿಯೂ ಒಂದನೇ ದಿನವಾಗಿಯೂ ಪರಿಗಣಿತವಾಗುತ್ತದೆ. ಆ ಖಾತೆಯಲ್ಲಿ ಅವಶ್ಯಕ ಮೊತ್ತವು ಲಭ್ಯವಿರುವ ಯಾವುದೇ ದಿನದಂದು ಬ್ಯಾಂಕ್ ದೇಣಿಗೆ ಮೊತ್ತವನ್ನು ವಸೂಲು ಮಾಡುತ್ತದೆ.

**12.3** ಮಾಸಿಕ ದೇಣಿಗೆಯನ್ನು ಫಸ್ಟ್ ಇನ್ ಫಸ್ಟ್ ಔಟ್ ಮಾದರಿಯಲ್ಲಿ ಅಂದರೆ, ಯಾವುದು ಮೊದಲು ವಸೂಲಿಗೆ ಬಾಕಿ ಇದೆಯೋ ಅದನ್ನು ಮೊದಲು ಎಂಬಂತೆ ಮೇಲೆ ಸೂಚಿಸಿದ ಶುಲ್ಕಗಳೊಂದಿಗೆ ವಸೂಲು ಮಾಡಲಾಗುತ್ತದೆ.

**12.4** ಖಾತೆಯಲ್ಲಿ ಶಿಲ್ಕಿನ ಲಭ್ಯತೆಯ ಮೇರೆಗೆ ಒಂದು ತಿಂಗಳಲ್ಲಿ ಒಂದಕ್ಕಿಂತ ಹೆಚ್ಚು ಬಾಕಿ ಕಂತುಗಳನ್ನೂ ವಸೂಲು ಮಾಡಬಹುದಾಗಿದೆ. ಮಾಸಿಕ ಬಾಕಿ ಮೊತ್ತಗಳೇನಾದರೂ ಇದ್ದಲ್ಲಿ ಅವುಗಳ ಸಹಿತವಾಗಿ ಮಾಸಿಕ ದೇಣಿಗೆ ಮೊತ್ತವನ್ನು ವಸೂಲು ಮಾಡಲಾಗುತ್ತದೆ. ಎಲ್ಲ ಪ್ರಕರಣಗಳಲ್ಲೂ ಮಾಸಿಕ ದೇಣಿಗೆಯನ್ನು ನಿಗದಿತ ಶುಲ್ಕದೊಂದಿಗೇ ವಸೂಲು ಮಾಡಲಾಗುತ್ತದೆ ಹಾಗೂ ಅದು ಬ್ಯಾಂಕಿನ ಆಂತರಿಕ ಪ್ರಕ್ರಿಯೆಯಾಗಿರುತ್ತದೆ. ಬಾಕಿ ಮೊತ್ತಗಳನ್ನು ಯಾವಾಗ ಖಾತೆಯಲ್ಲಿ ಶಿಲ್ಕು ಲಭ್ಯವಿರುವುದೋ ಆಗ ವಸೂಲು ಮಾಡಲಾಗುತ್ತದೆ.

## 13. ಅಟಲ್ ಪಿಂಚಣಿ ಯೋಜನೆಯಡಿ ದೇಣಿಗೆಗಳ ಹೂಡಿಕೆ

**13.1** ಅಟಲ್ ಪಿಂಚಣಿ ಯೋಜನೆಯಡಿ ಸಂಗ್ರಹಿಸಲಾಗುವ ದೇಣಿಗೆ ಮೊತ್ತವನ್ನು ಸರ್ಕಾರವು ನಿರ್ದಿಷ್ಟಪಡಿಸುವ ಹೂಡಿಕೆ ವಿನ್ಯಾಸದ ಪ್ರಕಾರ, ಪಿಂಚಣಿ ಅನುದಾನ ನಿಯಂತ್ರಕ ಹಾಗೂ ಅಭಿವೃದ್ಧಿ ಪ್ರಾಧಿಕಾರ (PFRDA)ವು ನಿಯೋಜಿಸುವ ಪಿಂಚಣಿ ನಿಧಿಗಳಲ್ಲಿ ನಿರ್ವಹಿಸಲಾಗುತ್ತದೆ. ಹೂಡಿಕೆ ವಿಧಾನವನ್ನಾಗಲೀ ಪಿಂಚಣಿ ನಿಧಿಯನ್ನಾಗಲೀ ಆಯ್ಕೆ ಮಾಡುವ ಅವಕಾಶವು ಚಂದಾದಾರರಿಗೆ ಇರುವುದಿಲ್ಲ.

## 14. ಚಂದಾದಾರರಿಗೆ ನಿರಂತರ ಮಾಹಿತಿ ರವಾನೆ

**14.1** ಖಾತೆಯಲ್ಲಿರುವ ಶಿಲ್ಕು, ದೇಣಿಗೆ ಜಮೆ ಇತ್ಯಾದಿ ಮಾಹಿತಿಗಳನ್ನು ನಿಯಮಿತವಾಗಿ ಅಟಲ್ ಪಿಂಚಣಿ ಯೋಜನಾ ಚಂದಾದಾರರಿಗೆ ಎಸ್.ಎಮ್.ಎಸ್. ಮೂಲಕ ರವಾನಿಸಲಾಗುತ್ತದೆ. ಇತರ ಮಾಹಿತಿಗಳಾದ ವಿಳಾಸ, ದೂರವಾಣಿ ಸಂಖ್ಯೆ, ನಾಮನಿರ್ದೇಶಿತರ ಹೆಸರು ಇತ್ಯಾದಿಗಳನ್ನು ಯಾವುದೇ ಹಂತದಲ್ಲಿ ಬದಲಾಯಿಸುವ ಅವಕಾಶವು ಚಂದಾದಾರರಿಗಿರುತ್ತದೆ.

**14.2** ಅಟಲ್ ಪಿಂಚಣಿ ಯೋಜನೆಯ ಎಲ್ಲ ಚಂದಾದಾರರು ತಮ್ಮ ಮೊಬೈಲ್ ದೂರವಾಣಿಯ ಮೂಲಕ ಯೋಜನೆಯ ಸಂಪರ್ಕದಲ್ಲಿರುತ್ತಾರೆ. ಕಂತು ಪಾವತಿಯ ವೇಳೆ, ಖಾತೆಯಿಂದ ಆಗುವ ಪಾವತಿಗಳ ಬಗ್ಗೆ, ಖಾತೆಯಲ್ಲಿ ಲಭ್ಯವಿರುವ ಶಿಲ್ಕಿನ ಬಗ್ಗೆ ನಿಯಮಿತವಾಗಿ ಚಂದಾದಾರರಿಗೆ ಎಸ್.ಎಮ್.ಎಸ್.ಗಳು ರವಾನೆಗೊಳ್ಳುತ್ತಲೇ ಇರುತ್ತವೆ.

## 15. ಹೊರಬರುವುದು ಹಾಗೂ ಪಿಂಚಣಿ ಪಾವತಿ

**15.1** 60 ವಯಸ್ಸು ಪೂರ್ಣಗೊಂಡಾಗ, ಚಂದಾದಾರರು ಖಾತರಿಪಡಿಸಿದ ಮಾಸಿಕ ಪಿಂಚಣಿಯ ತಮ್ಮ ಸೌಲಭ್ಯವನ್ನು ಪಡೆಯಲು ತಮ್ಮ ಬ್ಯಾಂಕಿಗೆ ಒಂದು ಮನವಿ ಪತ್ರವನನು ಸಲ್ಲಿಸತಕ್ಕದ್ದು.

**15.2** 60 ವಯಸ್ಸಿಗಿಂತ ಮೊದಲು ಯೋಜನೆಯಿಂದ ಹೊರಬರಲು ಅವಕಾಶವಿಲ್ಲ. ಆದರೆ, ಫಲಾನುಭವಿಯ ಮರಣ ಅಥವಾ ಮಾರಣಾಂತಿಕ ಖಾಯಿಲೆಗಳಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹೊರಬರುವ ಅವಕಾಶವನ್ನು ನೀಡಲಾಗುತ್ತದೆ.

**16**. ಸೇರ್ಪಡೆಗೊಳ್ಳುವ ವಯಸ್ಸು, ದೇಣಿಗೆ ಹಂತ, ನಿಗದಿತ ಮಾಸಿಕ ಪಿಂಚಣಿ ಹಾಗೂ ಚಂದಾದಾರರ ನಾಮನಿರ್ದೇಶಿತರಿಗೆ ಬಂಡವಾಳದ ಪಾವತಿ

**16.1** ದೇಣಿಗೆ ಹಂತಗಳ ಪಟ್ಟಿ, ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ನಿಗದಿತ ಮಾಸಿಕ ಪಿಂಚಣಿ ಹಾಗೂ ಚಂದಾದಾರರ ನಾಮನಿರ್ದೇಶಿತರಿಗೆ ಬಂಡವಾಳದ ಪಾವತಿ ಹಾಗೂ ದೇಣಿಗೆ ಅವಧಿಗಳನ್ನು ಈ ಕೆಳಗೆ ನೀಡಲಾಗಿದೆ. ಉದಾಹರಣೆಗೆ, ತನ್ನ 18ನೇ ವಯಸ್ಸಿನಲ್ಲಿ ಯೋಜನೆಗೆ ಸೇರ್ಪಡೆಗೊಳ್ಳುವ ಫಲಾನುಭವಿಯು ರೂ. 1000.00ದಿಂದ ರೂ. 5000.00ದವರೆಗೆ ನಿಗದಿತ ಮಾಸಿಕ ಪಿಂಚಣಿಯನ್ನು ಪಡೆಯಬೇಕಾದರೆ, ಮಾಹೆಯಾನ ರೂ. 42.00 ರಿಂದ ರೂ. 210.00ರವರೆಗೆ ಮಾಸಿಕ ದೇಣಿಗೆಯನ್ನು ಪಾವತಿಸಬೇಕಾಗುತ್ತದೆ. ಅದೇ, ಹಂತದ ಪಿಂಚಣಿಯನ್ನು ತನ್ನ 40ನೇ ವಯಸ್ಸಿನಲ್ಲಿ ಯೋಜನೆಗೆ ಸೇರ್ಪಡೆಗೊಳ್ಳುವ ಫಲಾನುಭವಿಯು ಪಡೆಯಬೇಕಾದರೆ, ಆ ಫಲಾನುಭವಿಯ ಮಾಸಿಕ ದೇಣಿಗೆಯು ರೂ. 291.00ರಿಂದ ರೂ. 1454.00ರಷ್ಟು ಇರಬೇಕಾಗುತ್ತದೆ.

**ಅಟಲ್ ಪಿಂಚಣಿ ಯೋಜನೆಯಡಿ ದೇಣಿಗೆ ಹಂತ, ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ರೂ. 1000.00 ನಿಗದಿತ ಮಾಸಿಕ ಪಿಂಚಣಿ ಮತ್ತು ನಾಮನಿರ್ದೇಶಿತರಿಗೆ ಬಂಡವಾಳ ಪಾವತಿ ಹಾಗೂ ದೇಣಿಗೆ ಅವಧಿಯ ಪಟ್ಟಿ**

| ಸೇರ್ಪಡೆ ವಯಸ್ಸು | ದೇಣಿಗೆ ಅವಧಿ | ಸೂಚಿತ ಮಾಸಿಕ ದೇಣಿಗೆ (ರೂ. ಗಳಲ್ಲಿ) | ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ಪಿಂಚಣಿ | ಚಂದಾದಾರರ ನಾಮನಿರ್ದೇಶಿತರಿಗೆ ಸೂಚಿತ ಬಂಡವಾಳ ಪಾವತಿ |
|---|---|---|---|---|
| 18 | 42 | 42 | 1000.00 | 1.7 ಲಕ್ಷ |
| 20 | 40 | 50 | 1000.00 | 1.7 ಲಕ್ಷ |
| 25 | 35 | 76 | 1000.00 | 1.7 ಲಕ್ಷ |
| 30 | 30 | 116 | 1000.00 | 1.7 ಲಕ್ಷ |
| 35 | 25 | 181 | 1000.00 | 1.7 ಲಕ್ಷ |
| 40 | 20 | 291 | 1000.00 | 1.7 ಲಕ್ಷ |

**ಅಟಲ್ ಪಿಂಚಣಿ ಯೋಜನೆಯಡಿ ದೇಣಿಗೆ ಹಂತ, ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ರೂ. 2000.00 ನಿಗದಿತ ಮಾಸಿಕ ಪಿಂಚಣಿ ಮತ್ತು ನಾಮನಿರ್ದೇಶಿತರಿಗೆ ಬಂಡವಾಳ ಪಾವತಿ ಹಾಗೂ ದೇಣಿಗೆ ಅವಧಿಯ ಪಟ್ಟಿ**

| ಸೇರ್ಪಡೆ ವಯಸ್ಸು | ದೇಣಿಗೆ ಅವಧಿ | ಸೂಚಿತ ಮಾಸಿಕ ದೇಣಿಗೆ (ರೂ. ಗಳಲ್ಲಿ) | ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ಪಿಂಚಣಿ | ಚಂದಾದಾರರ ನಾಮನಿರ್ದೇಶಿತರಿಗೆ ಸೂಚಿತ ಬಂಡವಾಳ ಪಾವತಿ |
|---|---|---|---|---|
| 18 | 42 | 84 | 2000.00 | 3.4 ಲಕ್ಷ |
| 20 | 40 | 100 | 2000.00 | 3.4 ಲಕ್ಷ |
| 25 | 35 | 151 | 2000.00 | 3.4 ಲಕ್ಷ |
| 30 | 30 | 231 | 2000.00 | 3.4 ಲಕ್ಷ |

| | | | | |
|---|---|---|---|---|
| 35 | 25 | 362 | 2000.00 | 3.4 ಲಕ್ಷ |
| 40 | 20 | 582 | 2000.00 | 3.4 ಲಕ್ಷ |

**ಅಟಲ್ ಪಿಂಚಣಿ ಯೋಜನೆಯಡಿ ದೇಣಿಗೆ ಹಂತ, ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ರೂ. 3000.00 ನಿಗದಿತ ಮಾಸಿಕ ಪಿಂಚಣಿ ಮತ್ತು ನಾಮನಿರ್ದೇಶಿತರಿಗೆ ಬಂಡವಾಳ ಪಾವತಿ ಹಾಗೂ ದೇಣಿಗೆ ಅವಧಿಯ ಪಟ್ಟಿ**

| ಸೇರ್ಪಡೆ ವಯಸ್ಸು | ದೇಣಿಗೆ ಅವಧಿ | ಸೂಚಿತ ಮಾಸಿಕ ದೇಣಿಗೆ (ರೂ. ಗಳಲ್ಲಿ) | ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ಪಿಂಚಣಿ | ಚಂದಾದಾರರ ನಾಮನಿರ್ದೇಶಿತರಿಗೆ ಸೂಚಿತ ಬಂಡವಾಳ ಪಾವತಿ |
|---|---|---|---|---|
| 18 | 42 | 126 | 3000.00 | 5.1 ಲಕ್ಷ |
| 20 | 40 | 150 | 3000.00 | 5.1 ಲಕ್ಷ |
| 25 | 35 | 226 | 3000.00 | 5.1 ಲಕ್ಷ |
| 30 | 30 | 347 | 3000.00 | 5.1 ಲಕ್ಷ |
| 35 | 25 | 543 | 3000.00 | 5.1 ಲಕ್ಷ |
| 40 | 20 | 873 | 3000.00 | 5.1 ಲಕ್ಷ |

**ಅಟಲ್ ಪಿಂಚಣಿ ಯೋಜನೆಯಡಿ ದೇಣಿಗೆ ಹಂತ, ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ರೂ. 4000.00 ನಿಗದಿತ ಮಾಸಿಕ ಪಿಂಚಣಿ ಮತ್ತು ನಾಮನಿರ್ದೇಶಿತರಿಗೆ ಬಂಡವಾಳ ಪಾವತಿ ಹಾಗೂ ದೇಣಿಗೆ ಅವಧಿಯ ಪಟ್ಟಿ**

| ಸೇರ್ಪಡೆ ವಯಸ್ಸು | ದೇಣಿಗೆ ಅವಧಿ | ಸೂಚಿತ ಮಾಸಿಕ ದೇಣಿಗೆ (ರೂ. ಗಳಲ್ಲಿ) | ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ಪಿಂಚಣಿ | ಚಂದಾದಾರರ ನಾಮನಿರ್ದೇಶಿತರಿಗೆ ಸೂಚಿತ ಬಂಡವಾಳ ಪಾವತಿ |
|---|---|---|---|---|
| 18 | 42 | 168 | 4000.00 | 6.8 ಲಕ್ಷ |
| 20 | 40 | 198 | 4000.00 | 6.8 ಲಕ್ಷ |
| 25 | 35 | 301 | 4000.00 | 6.8 ಲಕ್ಷ |
| 30 | 30 | 462 | 4000.00 | 6.8 ಲಕ್ಷ |
| 35 | 25 | 722 | 4000.00 | 6.8 ಲಕ್ಷ |
| 40 | 20 | 1164 | 4000.00 | 6.8 ಲಕ್ಷ |

**ಅಟಲ್ ಪಿಂಚಣಿ ಯೋಜನೆಯಡಿ ದೇಣಿಗೆ ಹಂತ, ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ರೂ. 5000.00 ನಿಗದಿತ ಮಾಸಿಕ ಪಿಂಚಣಿ ಮತ್ತು ನಾಮನಿರ್ದೇಶಿತರಿಗೆ ಬಂಡವಾಳ ಪಾವತಿ ಹಾಗೂ ದೇಣಿಗೆ ಅವಧಿಯ ಪಟ್ಟಿ**

| ಸೇರ್ಪಡೆ ವಯಸ್ಸು | ದೇಣಿಗೆ ಅವಧಿ | ಸೂಚಿತ ಮಾಸಿಕ ದೇಣಿಗೆ (ರೂ. ಗಳಲ್ಲಿ) | ಚಂದಾದಾರರು ಹಾಗೂ ಅವರ ಪತಿ/ ಪತ್ನಿಗೆ ಮಾಸಿಕ ಪಿಂಚಣಿ | ಚಂದಾದಾರರ ನಾಮನಿರ್ದೇಶಿತರಿಗೆ ಸೂಚಿತ ಬಂಡವಾಳ ಪಾವತಿ |
|---|---|---|---|---|
| 18 | 42 | 210 | 5000.00 | 8.5 ಲಕ್ಷ |
| 20 | 40 | 248 | 5000.00 | 8.5 ಲಕ್ಷ |
| 25 | 35 | 376 | 5000.00 | 8.5 ಲಕ್ಷ |
| 30 | 30 | 577 | 5000.00 | 8.5 ಲಕ್ಷ |
| 35 | 25 | 902 | 5000.00 | 8.5 ಲಕ್ಷ |
| 40 | 20 | 1454 | 5000.00 | 8.5 ಲಕ್ಷ |